












ಕಲೆಯ ಮೇಲೆ ಸ್ನಾತಕೋತ್ತರ ಪದವಿ ಪಡೆದರು. ಮೈಸೂರಿನ ಮಾನಸ ಗಂಗೋತ್ರಿಯಲ್ಲಿ ಪಿಎಚ್.ಡಿ.ಯನ್ನೂ ಪಡೆದರು.

1985–86ರಲ್ಲಿ ಕರ್ನಾಟಕ ಚಿತ್ರಕಲಾ ಪರಿಷತ್‌ನಲ್ಲಿ ನಡೆದ ರಾಷ್ಟ್ರೀಯ ಪ್ರದರ್ಶನದಲ್ಲಿ ಪ್ರದರ್ಶಿತವಾದ ರಂಗನಾಥ್ ಅವರ ಛಾಯಾಚಿತ್ರಗಳು ವಿಶೇಷ ಗಮನ ಸೆಳೆದಿದ್ದವು. 1985–87ರ ರಾಷ್ಟ್ರೀಯ ಪ್ರದರ್ಶನದಲ್ಲಿ ಪ್ರಶಸ್ತಿ ಕೂಡ ಅವರಿಗೆ ಲಭಿಸಿತ್ತು. 1998ರಲ್ಲಿ ಲಲಿತಕಲಾ ಅಕಾಡೆಮಿಯ ರಾಷ್ಟ್ರಪ್ರಶಸ್ತಿ ಪುರಸ್ಕಾರ ದೊರೆಯಿತು. 2014ರಲ್ಲಿ ಕರ್ನಾಟಕ ಲಲಿತಕಲಾ ಅಕಾಡೆಮಿಯೂ ರಾಜ್ಯಪ್ರಶಸ್ತಿ ಕೊಟ್ಟು ಗೌರವಿಸಿದೆ.

ಕಪ್ಪು–ಬಿಳುಪು ಛಾಯಾಚಿತ್ರಗಳನ್ನೇ ತಮ್ಮ ಅಭಿವ್ಯಕ್ತಿ ಮಾಧ್ಯಮವನ್ನಾಗಿಸಿಕೊಂಡಿದ್ದ ಅವರು ಕಲರ್ ಮೊರೆ ಹೋಗಿದ್ದು ತುಂಬ ಅಪರೂಪ. ತಾವು ತೆಗೆದ ಛಾಯಾಚಿತ್ರಗಳನ್ನು ತಾವೇ ಸಂಸ್ಕರಿಸಿ, ಮುದ್ರಿಸುತ್ತಿದ್ದ ರಂಗನಾಥ್, ತೀರಾ ಇತ್ತೀಚೆಗಷ್ಟೇ ಡಿಜಿಟಲ್ ತಂತ್ರಜ್ಞಾನಕ್ಕೆ ಹೊರಳಿಕೊಂಡಿದ್ದರು.



ಛಾಯಾಗ್ರಾಹಕರಾಗಿ ಅವರು ಮಾಡಿದ ಸಾಧನೆ ಒಂದು ಮಗ್ಗುಲಾದರೆ, ಶಿಕ್ಷಕನಾಗಿ ಹೊಸ ಪೀಳಿಗೆಯನ್ನು ರೂಪಿಸಿದ್ದು ಅವರ ವ್ಯಕ್ತಿತ್ವದ ಇನ್ನೊಂದು ಮಹತ್ವದ ಮಗ್ಗುಲು. 2021ರ ಮೇ 8ರಂದು ಕೊನೆಯುಸಿರೆಳೆಯುವವರೆಗೂ ಅವರು ಕಾಲೇಜ್ ಆಫ್ ಫೈನ್ ಆರ್ಟ್ಸ್‌ನ ಅಪ್ಲೈಡ್ ಆರ್ಟ್ ವಿಭಾಗದಲ್ಲಿ ಪ್ರಾಧ್ಯಾಪಕರಾಗಿ ಸೇವೆ ಸಲ್ಲಿಸುತ್ತಿದ್ದರು. ಸದಾ ಕಾಲ ಜೀವನೋತ್ಸಾಹವನ್ನು ತುಂಬಿಕೊಂಡು, ತನ್ನ ಸುತ್ತಲಿನ ಸ್ನೇಹಿತರು, ವಿದ್ಯಾರ್ಥಿಗಳಿಗೂ ಅದನ್ನು ಹಂಚುತ್ತಿದ್ದ ರಂಗನಾಥ್, ತಮ್ಮ ಒಡನಾಟಕ್ಕೆ ಬಂದ ಯಾರಿಗೂ ಸುಲಭಕ್ಕೆ ಮರೆಯಲು ಸಾಧ್ಯವಾಗದ ವ್ಯಕ್ತಿತ್ವದವರು.

ಈಗ ಕಾಲೇಜ್ ಆಫ್ ಆರ್ಟ್ಸ್‌ನ ಅಲ್ಯೂಮ್ನಿ ಅಸೋಸಿಯೇಷನ್ ಆಯೋಜಿಸಿರುವ ರಂಗನಾಥ್ ಅವರ ಛಾಯಾಚಿತ್ರ ಪ್ರದರ್ಶನದಲ್ಲಿ ಒಟ್ಟು 45 ಚಿತ್ರಗಳಿವೆ. ರಂಗನಾಥ್ ಅವರ ವೈಯಕ್ತಿಕ ಸಂಗ್ರಹ, ಸ್ನೇಹಿತರು, ವಿವಿಧ ಸಂಸ್ಥೆಗಳಿಂದ ಪಡೆದುಕೊಂಡ ಅಪರೂಪದ ಛಾಯಾಚಿತ್ರಗಳು ಇಲ್ಲಿವೆ.

ಗಾಯಕನಿಗೆ ಸಾವಿರಬಹುದು; ಆದರೆ ಅವನು ಹಾಡಿದ ಹಾಡಿಗಲ್ಲ. ಹಾಗೆಯೇ 'ಕೊನೆಯ ಕಾವ್ಯ' ಹೆಸರಿನ ಇಲ್ಲಿನ ಛಾಯಾಚಿತ್ರಗಳನ್ನು ತೆಗೆದ ರಂಗನಾಥ್ ಅವರು ಅಸುನೀಗಿರಬಹುದು; ಆದರೆ ಅವರ ಕ್ಯಾಮೆರಾ ಬರೆದ ಒಂದೊಂದು ದೃಶ್ಯಕಾವ್ಯವೂ ರಿಂಗಣಿಸುವ ಧ್ವನಿಶಕ್ತಿ ಸದಾ ಜೀವಂತವಾಗಿರುವಂಥದ್ದು.

ಪ್ರತಿಕ್ರಿಯಿಸಿ: **feedback@sudha.co.in**